# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್‌ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ದಿನಾಂಕ: 14-03-2019 ರಂದು ಪೂರ್ವಾಹ್ನ 10-30 ಗಂಟೆಗೆ ನಡೆದ ಶಿಕ್ಷಣ ಮಂಡಳಿಯ ವಿಶೇಷ ಸಭೆಯ ನಡವಳಿಗಳು.

<u>ಸಭೆಗೆ ಹಾಜರಾದ ಸದಸ್ಯರುಗಳು</u>

1. ಪ್ರೊ. ಜಿ. ಹೇಮಂತ ಕುಮಾರ್ ಕುಲಪತಿಗಳು ... ಅಧ್ಯಕ್ಷರು
2. ಡಾ.ಎಂ.ಸಿ.ನಟರಾಜ ... ಸದಸ್ಯರು
3. ಶ್ರೀ ಶಾಂತಕುಮಾರ. ಕೆ ... ಸದಸ್ಯರು
4. ಶ್ರೀಮತಿ ಎಂ.ಎನ್.ಪೊನ್ನಮ್ಮ ... ಸದಸ್ಯರು
5. ಶ್ರೀ.ಜಿ.ಅಶ್ವತ್ಥ್ ನಾರಾಯಣ ... ಸದಸ್ಯರು
6. ಶ್ರೀ.ಕುಮಾರ್ ... ಸದಸ್ಯರು
7. ಡಾ.ಪಿ.ಎಸ್.ಸುರೇಶ್ ... ಸದಸ್ಯರು
8. ಡಾ.ಎಂ.ಪ್ರೀತಿ ... ಸದಸ್ಯರು
9. ಡಾ.ರಾಜಗೋಪಾಲ್ ... ಸದಸ್ಯರು
10. ಪ್ರೊ. ಹೆಚ್.ಟಿ.ಬಸವರಾಜಪ್ಪ ... ಸದಸ್ಯರು
11. ಪ್ರೊ.ಎಸ್.ಎಲ್. ಬೆಳಗಲಿ ... ಸದಸ್ಯರು
12. ಪ್ರೊ. ಜಿ. ನಾಗೇಂದ್ರಪ್ಪ ... ಸದಸ್ಯರು
13. ಪ್ರೊ. ಡಿ. ಆನಂದ ... ಸದಸ್ಯರು
14. ಡಾ. ಎಸ್.ಮದಿಅಳಗನ್ ... ಸದಸ್ಯರು
15. ಶ್ರೀ ರಘು ಸಿ ಎಸ್ ... ಸದಸ್ಯರು
16. ಶ್ರೀ ಬೆಳವಾಡಿ ಪ್ರಭಾಕರ ... ಸದಸ್ಯರು
17. ಡಾ.ಪಿ. ಸರಸ್ವತಿ, ಗ್ರಂಥಪಾಲಕರು ... ಸದಸ್ಯರು
18. ಡಾ.ಎಸ್. ಶ್ರೀಕಂಠಸ್ವಾಮಿ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ ... ಸದಸ್ಯರು
19. ಪ್ರೊ. ಯಶವಂತ ಡೋಂಗ್ರೆ, ನಿರ್ದೇಶಕರು, ಪಿ.ಎಂ.ಇ.ಬಿ. ... ಸದಸ್ಯರು
20. ಡಾ.ಪಿ.ಕೃಷ್ಣಯ್ಯ, ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ ... ಸದಸ್ಯರು
21. ಪ್ರೊ. ಕೆ. ಎಂ. ಮಹದೇವನ್ ಕುಲಸಚಿವ(ಪರೀಕ್ಷಾಂಗ) ... ಸದಸ್ಯರು
22. ಪ್ರೊ.ಬಿ.ಮಹದೇವಪ್ಪ, ಹಣಕಾಸು ಅಧಿಕಾರಿಗಳು ... ಸದಸ್ಯರು
23. ಪ್ರೊ. ಲಿಂಗರಾಜ ಗಾಂಧಿ, ಕುಲಸಚಿವರು ... ಸದಸ್ಯ ಕಾರ್ಯದರ್ಶಿ

ವಿಶೇಷ ಆಹ್ವಾನಿತರು

24. ಪ್ರೊ. ಸದಾನಂದ ಎಂ ಯಮಕನಮರಡಿ

<u>ಸಭೆಗೆ ಹಾಜರಾಗದವರು</u>

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ, ಕರ್ನಾಟಕ ಸರ್ಕಾರ
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
3. ಶ್ರೀ ಅಪ್ಪಾಜಿಗೌಡ, ವಿಧಾನ ಪರಿಷತ್ ಸದಸ್ಯರು
4. ಶ್ರೀ ಕೆ. ಟಿ. ಶ್ರೀಕಂಠೇಗೌಡ, ವಿಧಾನ ಪರಿಷತ್ ಸದಸ್ಯರು
5. ಡಾ. ವಿ. ಶಿವಪ್ರಸಾದ್
6. ಶ್ರೀ ಜೆ.ಯು. ಚನ್ನಬಸಪ್ಪ
7. ಪ್ರೊ. ಎನ್. ಎಂ. ತಳವಾರ್
8. ಪ್ರೊ. ಶಿವಬಸವಯ್ಯ
9. ಪ್ರೊ. ಸಿ. ರಾಮಸ್ವಾಮಿ, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ
10. ಶ್ರೀ ನಾಗೇಶ್ ಕರಿಯಪ್ಪ
11. ಪ್ರೊ. ಮಹದೇವ
12. ಪ್ರೊ. ಸಿ. ಬಸವರಾಜು

ಮೊದಲಿಗೆ, ಮಾನ್ಯ ಕುಲಪತಿಗಳು ಮಾತನಾಡಿ ಶಿಕ್ಷಣ ಮಂಡಳಿ ವಿಶೇಷ ಸಭೆಗೆ ಆಗಮಿಸಿರುವ ಎಲ್ಲಾ ಸದಸ್ಯರುಗಳನ್ನು ಹಾಗೂ ಪತ್ರಿಕಾ ಮಾಧ್ಯಮದವರನ್ನು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ನೂತನ ಕುಲಸಚಿವರುಗಳಾಗಿ ನೇಮಕಗೊಂಡಿರುವ ಪ್ರೊ. ಲಿಂಗರಾಜ ಗಾಂಧಿ, ಪ್ರೊ. ಕೆ. ಎಂ. ಮಹದೇವನ್ ಕುಲಸಚಿವ(ಪರೀಕ್ಷಾಂಗ) ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರುಗಳನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಶಿಕ್ಷಣ ಮಂಡಳಿಗೆ ಹೊಸದಾಗಿ ನಾಮನಿರ್ದೇಶನಗೊಂಡಿರುವ ಈ ಕೆಳಕಂಡ ಸದಸ್ಯರುಗಳನ್ನು ಸಭೆಗೆ ಪರಿಚಯಿಸಿ, ಅವರನ್ನೂ ಸಹ ಸಭೆಗೆ ಸ್ವಾಗತಿಸಲಾಯಿತು.

1. ಪ್ರೊ. ಜಿ. ನಾಗೇಂದ್ರಪ್ಪ, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು
2. ಪ್ರೊ. ಡಿ. ಆನಂದ, ಡೀನರು, ವಾಣಿಜ್ಯ ನಿಕಾಯ, ವ್ಯವಹಾರ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.

ಇದುವರೆವಿಗೂ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರು ಹಾಗೂ ಶಿಕ್ಷಣ ಮಂಡಳಿ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಈ ಕೆಳಕಂಡವರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1. ಪ್ರೊ. ಆರ್. ರಾಜಣ್ಣ, ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು
2. ಪ್ರೊ. ಜೆ. ಸೋಮಶೇಖರ್, ಕುಲಸಚಿವರು(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಪ್ರೊ. ಬಿ.ಪಿ. ಮಹೇಶ್‌ಚಂದ್ರಗುರು, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
4. ಪ್ರೊ. ಆಯಿಷಾ ಎಂ. ಶರೀಫ್, ಡೀನರು, ವಾಣಿಜ್ಯ ನಿಕಾಯ, ವ್ಯವಹಾರ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

| ವಿಷಯ ಸಂಖ್ಯೆ: | ವಿಷಯ ಸಂಕ್ಷಿಪ್ತವಾಗಿ |
|---|---|
| **I.1** | ದಿನಾಂಕ 14-01-2019ರಂದು ನಡೆದ ಶಿಕ್ಷಣ ಮಂಡಳಿಯ ಎರಡನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | ದಿನಾಂಕ 14-01-2019ರಂದು ನಡೆದ ಶಿಕ್ಷಣ ಮಂಡಳಿ ಮೊದಲನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು. |
| **II.1** | 2019-20ನೇ ಶೈಕ್ಷಣಿಕ ವರ್ಷಕ್ಕೆ ಸ್ಥಳೀಯ ತನಿಖಾ ಸಮಿತಿಯು ನೀಡಿರುವ ಸಂಯೋಜನಾ ವರದಿಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕರಾದ ಡಾ. ಎಸ್. ಶ್ರೀಕಂಠಸ್ವಾಮಿರವರನ್ನು 2019-20ನೇ ಶೈಕ್ಷಣಿಕ ವರ್ಷಕ್ಕೆ ಸ್ಥಳೀಯ ತನಿಖಾ ಸಮಿತಿಯ ನೀಡಿರುವ ಸಂಯೋಜನಾ ವರದಿಯನ್ನು ಸಭೆಗೆ ವಿವರಿಸುವಂತೆ ಹಾಗೂ ಸಂಯೋಜನಾ ವರದಿಯನ್ನು ದಿನಾಂಕ 31-03-2019ರೊಳಗೆ ಸರ್ಕಾರಕ್ಕೆ ಸಲ್ಲಿಸಬೇಕೆಂದು ಸಭೆಯಲ್ಲಿ ತಿಳಿಸಿದರು.<br>ನಂತರ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರಾದ ಡಾ. ಎಸ್. ಶ್ರೀಕಂಠಸ್ವಾಮಿಯವರು ಮಾತನಾಡಿ 2019-20ನೇ ಶೈಕ್ಷಣಿಕ ವರ್ಷಕ್ಕೆ ಸ್ಥಳೀಯ ತನಿಖಾ ಸಮಿತಿಯು ನೀಡಿರುವ ಸಂಯೋಜನಾ ವರದಿಗಳನ್ನು ಹಾಗೂ ವಿಚಾರಣಾ ಸಮಿತಿ ಶಿಫಾರಸ್ಸು ಮಾಡಿರುವ ಕಾಲೇಜುಗಳ ವಿವರವನ್ನು ಶಿಕ್ಷಣ ಮಂಡಳಿ ಸಭೆಗೆ ವಿವರಿಸಿ, ಅನುಮೋದಿಸಬೇಕೆಂದು ಕೋರಿದರು.<br>ಕುಲಸಚಿವರು ಮಾತನಾಡಿ ಈ ವರದಿಯು ಸಾಂಪ್ರದಾಯಿಕವಾಗಿ ವಿಸ್ತೃತ ವರದಿಯಾಗಿರುತ್ತದೆ. ಸಮಿತಿಯು ಶಿಫಾರಸ್ಸು ಮಾಡಿರುವ ಸಂಪೂರ್ಣ ವರದಿಯನ್ನು ಮತ್ತು ಸದಸ್ಯರುಗಳ ಹೆಸರನ್ನು ಪುಸ್ತಕದಲ್ಲಿ ಮುದ್ರಿಸಲಾಗಿರುತ್ತದೆ ಎಂದು ತಿಳಿಸಿದರು.<br>ಡಿ.ಎಫ್.ಆರ್.ಎಲ್.ನಲ್ಲಿ ಎಂ.ಎಸ್ಸಿ, ಕೋರ್ಸಿಗೆ ಬೇಡಿಕೆ ಇರುವುದರಿಂದ ಸದರಿ ಕೋರ್ಸ್ ಅನ್ನು ಸಹ ಪ್ರಾರಂಭಿಸಲಾಗುವುದೆಂದು ತಿಳಿಸಿದರು. ಈ ಸಂಬಂಧ ಕೋರ್ಸಿಗೆ ಸೇರಬಯಸುವ in-service ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಕೋರಿರುವುದನ್ನು ಸಹ ಸಭೆಗೆ ವಿವರಿಸಿದರು. |
| ತೀರ್ಮಾನ | 2019-20ನೇ ಶೈಕ್ಷಣಿಕ ವರ್ಷಕ್ಕೆ ಸ್ಥಳೀಯ ತನಿಖಾ ಸಮಿತಿಯು ನೀಡಿರುವ ಸಂಯೋಜನಾ ವರದಿಗಳನ್ನು ಸರ್ಕಾರದ ಅನುಮೋದನೆಗೆ ಕಳುಹಿಸಲು ಶಿಕ್ಷಣ ಮಂಡಳಿ ಸಭೆಯು ಅನುಮೋದಿಸಿತು. |
| **II.2** | ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ ಸಭೆಗಳ ನಿರ್ಣಯದ ಮೇರೆಗೆ ಸ್ಪೆಷಲೈಸ್ಡ್ ಪ್ರೋಗ್ರಾಂ ಮತ್ತು ಸಂಶೋಧನಾ ಕೇಂದ್ರಗಳ ಮಾನ್ಯತೆಯ ಬಗ್ಗೆ ಪುನರ್ ರಚಿತವಾಗಿದ್ದ ಸಮಿತಿಯ ನಡವಳಿ ಅನುಮೋದನೆ ಬಗ್ಗೆ. |
| | ಮೈಸೂರು ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದು ನಡೆಸಲಾಗುತ್ತಿರುವ ಸ್ಪೆಷಲೈಸ್ಡ್ ಪ್ರೋಗ್ರಾಂ ಮತ್ತು ಸಂಶೋಧನಾ ಕೇಂದ್ರಗಳ ಮಾನ್ಯತೆ, ತಾಂತ್ರಿಕ ವಿಷಯಗಳಲ್ಲಿನ ಮಾನ್ಯತೆ ಬಗ್ಗೆ ದಿನಾಂಕ 13-02-2019 ಪುನರ್ ರಚಿವಾಗಿದ್ದ ಸಮಿತಿಯ ನಡವಳಿಯನ್ನು ಅನುಮೋದಿಸಬಹುದೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. |

| | |
|---|---|
| | Further, Prof. G. Nagendrappa expressed his opinion that some of the Research Centers are not following Ph.D regulations regarding course work, Panel of examiners etc;<br><br>In reply, the Vice-Chancellor said that the BoS Chairman will take the responsibility for preparation of examiners list.<br><br>Further, Registrar, Prof.Lingaraj Gandhi said that Ph.D regulations are common to Research Centers as well as University Department of Studies. They cannot violate regulations, if any such cases are found, the University will act as per the provisions of law. |
| ತೀರ್ಮಾನ | ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ ಸಭೆಗಳ ನಿರ್ಣಯದ ಮೇರೆಗೆ ಸ್ಪೆಷಲೈಸ್ಡ್ ಪ್ರೋಗ್ರಾಂ ಮತ್ತು ಸಂಶೋಧನಾ ಕೇಂದ್ರಗಳ ಮಾನ್ಯತೆಯ ಬಗ್ಗೆ ಪುನರ್ ರಚಿತವಾಗಿದ್ದ ಸಮಿತಿಯ ನಡವಳಿಯನ್ನು ಅನುಮೋದಿಸಲಾಯಿತು. |
| **II.3** | ಉನ್ನತ ಶಿಕ್ಷಣದಲ್ಲಿ ಶೈಕ್ಷಣಿಕ ದಾಖಲಾತಿ ಅನುಪಾತ (Gross Enrollment Ratio) ಹೆಚ್ಚಿಸುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ ಉನ್ನತ ಶಿಕ್ಷಣದಲ್ಲಿ ದಾಖಲಾತಿ ಅನುಪಾತ (Gross Enrollment Ratio)ಅನ್ನು ಈಗಾಗಲೇ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಹಾಗೂ ಸರ್ಕಾರಿ ಕಾಲೇಜುಗಳಲ್ಲಿ ಶೇಕಡ 20 ರಷ್ಟು ಹೆಚ್ಚುವರಿ ಪ್ರವೇಶಾತಿ ಕಲ್ಪಸಲು ಸರ್ಕಾರವು ಆದೇಶಿಸಿರುವ ವಿಷಯವನ್ನು ಸಭೆಗೆ ಗಮನಕ್ಕೆ ತಂದು ಈ ಬಗ್ಗೆ ವಿಶ್ವವಿದ್ಯಾನಿಲಯದಲ್ಲಿ ಒಂದು ಸಮಿತಿಯನ್ನು ರಚಿಸಲಾಗುವುದೆಂದು ಸಭೆಗೆ ತಿಳಿಸಿದರು. |
| ತೀರ್ಮಾನ | ಸರ್ಕಾರದ ಆದೇಶದಂತೆ 2019-20ನೇ ಶೈಕ್ಷಣಿಕ ಸಾಲಿನಿಂದ ಸರ್ಕಾರಿ ಕಾಲೇಜುಗಳ Intakeಗೆ ಶೇಕಡ 20 ರಷ್ಟು ಹೆಚ್ಚಿಸಲು ಮತ್ತು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಶೇಕಡ 20 ರಷ್ಟು ಸೀಟುಗಳನ್ನು ಹೆಚ್ಚಿಸುವ ಸಂಬಂಧ ಒಂದು ಸಮಿತಿಯನ್ನು ರಚಿಸಲು ಮತ್ತು ಆದರಂತೆ ಕ್ರಮವಹಿಸಲು ತೀರ್ಮಾನಿಸಲಾಯಿತು. |
| **II.4** | ಪ್ರೊ. ಉಷಾ ರಾಣಿ ನಾರಾಯಣ ನಾಗರತ್ನರವರ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಪ್ರೊ. ಉಷಾ ರಾಣಿ ನಾರಾಯಣ ನಾಗರತ್ನ ಚಿನ್ನದ ಪದಕ ದತ್ತಿ ಸ್ಥಾಪನೆಯನ್ನು ಅನುಮೋದಿಸಲಾಯಿತು. |

| | |
|---|---|
| **II.5** | ಪ್ರೊ. ಉಷಾ ರಾಣಿ ಸೌಮ್ಯನಾಯಕಿರವರ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | ಪ್ರೊ. ಉಷಾ ರಾಣಿ ಸೌಮ್ಯನಾಯಕಿರವರ ಚಿನ್ನದ ಪದಕ ದತ್ತಿ ಸ್ಥಾಪನೆಯನ್ನು ಅನುಮೋದಿಸಲಾಯಿತು. |
| **II.6** | ಪ್ರೊ. ಬಿ.ಪಿ. ಮಹೇಶ್ ಚಂದ್ರಗುರುರವರ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | ಪ್ರೊ. ಬಿ.ಪಿ. ಮಹೇಶ್‌ಚಂದ್ರಗುರು ಚಿನ್ನದ ಪದಕ ದತ್ತಿ ಸ್ಥಾಪನೆಯನ್ನು ಅನುಮೋದಿಸಲಾಯಿತು. |

ಮಾನ್ಯ ಕುಲಪತಿಗಳು ಮಾತನಾಡಿ ದಿನಾಂಕ 17-03-2019ರಂದು ಭಾನುವಾರ ವಿಶ್ವವಿದ್ಯಾನಿಲಯದ 99ನೇ ಘಟಿಕೋತ್ಸವ ಕಾರ್ಯಕ್ರಮ ಇರುವುದರಿಂದ ಅಂದು ಬೆಳಿಗ್ಗೆ 8-30 ಗಂಟೆಗೆ ಶಿಕ್ಷಣ ಮಂಡಳಿಯ ವಿಶೇಷ ಸಭೆ ಮತ್ತು 9-00 ಗಂಟೆಗೆ ಸಿಂಡಿಕೇಟಿನ ವಿಶೇಷ ಸಭೆಯನ್ನು ಏರ್ಪಡಿಸಲಾಗಿದೆ ಎಂದು ತಿಳಿಸಿ, ಘಟಿಕೋತ್ಸವ ಕಾರ್ಯಕ್ರಮ ಎಲ್ಲಾ ಸದಸ್ಯರು ಹಾಜರಾಗಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಯಲು ಎಲ್ಲರು ಸಹಕರಿಸಬೇಕೆಂದು ತಿಳಿಸಿದರು.

ಕೊನೆಯಲ್ಲಿ ಶಿಕ್ಷಣ ಮಂಡಳಿಯ ವಿಶೇಷ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಅತ್ಯಮೂಲ್ಯ ಸಲಹೆ ಸಹಕಾರಗಳನ್ನು ನೀಡಿ ತೀರ್ಮಾನ ಕೈಗೊಳ್ಳಲು ಸಹಕರಿಸಿದ ಎಲ್ಲಾ ಸದಸ್ಯರುಗಳಿಗೆ ಹಾಗೂ ಪ್ರತಿಕಾ ಮಾಧ್ಯವದವರಿಗೆ ಮಾನ್ಯ ಕುಲಪತಿಗಳು ವಂದನೆ ಸಲ್ಲಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/-
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

ಸಹಿ/-
ಕುಲಪತಿಗಳು ಹಾಗೂ ಅಧ್ಯಕ್ಷರು